ಡೆಸ್ಕ್‌ನ ಕೆಳಗಡೆ ಸಾಕಷ್ಟು ಕಸ ಬಿದ್ದಿರುತ್ತಿದ್ದರೂ ಏನು ಅನ್ನುತ್ತಿರಲಿಲ್ಲ. ಹಾಗೇ ಪಾಠ ಮಾಡಿ ಹೋಗುತ್ತಿದ್ದರು.

ರಾಮು ಚೆನ್ನನೊಂದಿಗೆ ಸೇರಿಕೊಂಡು ಅವನ ಕೆಲಸಗಳಿಗೆಲ್ಲ ಜೊತೆಯಾದ. ಇವರಿಬ್ಬರೇ ತರಗತಿಯ ಕೊಠಡಿ, ಮೈದಾನ ಸ್ವಚ್ಛಗೊಳಿಸುವುದು, ಅಲ್ಲಲ್ಲಿ ಕಸ ಹಾಕಲು ರಟ್ಟಿನ ಡಬ್ಬಿಗಳನ್ನು ಇಡುವುದು, ಗಿಡಗಳಿಗೆ ನೀರು ಹಾಕುವುದು ಮಾಡಿದರು. ಯಾರೂ ಏನೇ ಅಂದರೂ ನಕ್ಕರೂ ತಲೆಕೆಡಿಸಿಕೊಳ್ಳಲಿಲ್ಲ. ತರಗತಿಯ, ಶಾಲೆಯ ಪರಿಸರ ಬದಲಾಗುತ್ತಿದ್ದನ್ನು ನೋಡಿ ರಾಮನಿಂದ ದೂರವಾಗಿದ್ದ ನಾಗನು ‘ಖಾಲಿ ಕುಳಿತು ಏನು ಮಾಡುವುದಿದೆ?’ ಎಂದು ಕೈ ಜೋಡಿಸಿದ. ಅವನನ್ನು ನೋಡಿದ ಮಲ್ಲ, ಗಿರಿ, ಶೇಖರ್ ಎಲ್ಲರೂ ಶುರು ಹಚ್ಚಿಕೊಂಡರು. ಒಂದು ತರಗತಿಯಿಂದ ಮತ್ತೊಂದು ತರಗತಿಗೆ ಈ ಸ್ವಚ್ಛತಾ ಅಭಿಯಾನ ವಿಸ್ತರಿಸಿತು. ಶಾಲೆಯಲ್ಲಿ ತರಗತಿ ಕೋಣೆಗಳಲ್ಲಿ ಶಿಸ್ತು ಕಂಗೊಳಿಸಹತ್ತಿತು. ಶೌಚಾಲಯಗಳ ದುರ್ಗಂಧವೂ ಕಡಿಮೆಯಾಯಿತು. ಶಾಲಾ ಪರಿಸರ ಕಳೆಗಟ್ಟಿತು.



ಅಂದು ಆಕಸ್ಮಿಕವಾಗಿ ಶಾಲೆಗೆ ಆಯುಕ್ತರು ಭೇಟಿ ಕೊಟ್ಟರು. ಮುಖ್ಯಗುರುಗಳು, ಶಿಕ್ಷಕರೆಲ್ಲಾ ಕಂಗಾಲಾದರು. ಶಾಲಾ ದಾಖಲಾತಿಗಳನ್ನು ಸರಿಯಾಗಿ ನಿರ್ವಹಿಸಿರಲಿಲ್ಲ. ‘ಏನು ಮಾಡುವರೋ?’ ಎಂದು ಭಯಭೀತರಾದರು. ಶಾಲಾ ಆವರಣದೊಳಕ್ಕೆ ಪ್ರವೇಶಿಸಿದ ಆಯುಕ್ತರು ಶಾಲಾ ಪರಿಸರ, ಸ್ವಚ್ಛತೆ ನೋಡಿ ಹೆಮ್ಮೆಪಟ್ಟರು. ಐದಾರು ಶಾಲೆಗಳಿಗೆ ಭೇಟಿ ಕೊಟ್ಟು ಅಲ್ಲಿಯ ಅವ್ಯವಸ್ಥೆ ನೋಡಿ ಬೇಜಾರಾಗಿ ಬಂದಿದ್ದ ಆಯುಕ್ತರು, ಈ ಶಾಲೆಯ ಪರಿಸರದಿಂದ ಸಂತುಷ್ಟರಾದರು. ಮುಖ್ಯಗುರುಗಳಿಗೆ ಶಿಕ್ಷಕರಿಗೆ ಅಪಾರವಾಗಿ ಮಕ್ಕಳ ಮುಂದೆ ಹೊಗಳಿದರು. ಮಕ್ಕಳ ಮಹತ್ವ ಅರಿವಾಗಿದ್ದು ಆ ಕ್ಷಣಕ್ಕೆ. ತಮ್ಮದೇನೂ ಪಾತ್ರ ಇಲ್ಲ ಎಂದು ಗೊತ್ತಿದ್ದ ಅವರಿಗೆ ಹೊಗಳುತ್ತಿದ್ದಾಗ ಒಂದೊಂದು ಮಾತೂ ಚುಚ್ಚುತ್ತಿದ್ದವು. ಕೊನೆಗೆ ಮಧ್ಯಪ್ರವೇಶಿಸಿ, ‘ಸರ್, ನಮ್ಮದೇನು ಇಲ್ಲ. ಇದೆಲ್ಲ ಮಕ್ಕಳ ಕೆಲಸ. ನಮಗೆ ಇಲಾಖೆ ಎಷ್ಟೇ ಆದೇಶ ಹೊರಡಿಸಿದರೂ ಕಾಟಚಾರಕ್ಕೆ ಮಾಡುತ್ತಿದ್ದ ನಮಗೆ ಇಂದು ಮಕ್ಕಳು ಕಣ್ಣು ತೆರೆಸಿದ್ದಾರೆ. ಎಲ್ಲಾ ಅವರದೇ ಸ್ವಂತ ಆಲೋಚನೆ. ನಮ್ಮದೂ ಏನೂ ಇಲ್ಲ. ಅದರಲ್ಲಿ ರಾಮು ಎನ್ನುವ ಹುಡುಗ ಈ ಶಾಲೆಗೆ ಬಂದಾಗಿನಿಂದ ಹೀಗಾಗಿದೆ’ ಎಂದು ಮುಖ್ಯಗುರುಗಳು ನುಡಿದರು.

‘ಸರ್... ಇದು ನನ್ನ ಕೆಲಸ ಅಲ್ಲ, ಚೆನ್ನನದು. ಅವನ ಆದರ್ಶ ಕಾರ್ಯಗಳಿಂದ ನಾವು ಬದಲಾಗಿದ್ದು. ಎಲ್ಲರೂ ಚೆನ್ನನನ್ನು ಅಬ್‌ನಾರ್ಮಲ್ ಎಂದು ಬಯ್ಯುತ್ತಿದ್ದರು. ಆದರೆ ಅವನ ವಿಶೇಷತೆ ಬಗ್ಗೆ ಹೇಳಿದರೂ ಯಾರೂ ಕೇಳಿಸಿಕೊಳ್ಳುತ್ತಿರಲಿಲ್ಲ’ ಎಂದು ಆಯುಕ್ತರಿಗೆ ಚೆನ್ನನ ಬಗ್ಗೆ ರಾಮು ಅಂಜದೆ ಮುಂದೆ ಬಂದು ತಿಳಿಸಿದ. ‘ಮೊದಲು ನಾನು ಚೆನ್ನ ಮಾಡುವುದನ್ನು ಚೇಷ್ಟೆ ಮಾಡುತ್ತಿದ್ದೆ, ನಂತರ ರಾಮುವಿನ ಮೂಲಕ ಚೆನ್ನನ ಮಹತ್ವ ಗೊತ್ತಾಗಿ ನಾನೂ ಅವನಂತೆ ನಡೆದುಕೊಳ್ಳುತ್ತಿರುವೆ’ ಎಂದು ಚೆನ್ನನ ಬಗ್ಗೆ, ಇಡೀ ಶಾಲೆಯ ವಾತಾವರಣ ಬದಲಾದ ಬಗ್ಗೆ ನಾಗ ಮಾತಾಡಿದ.

ಆಯುಕ್ತರು ಖುಷಿಯಿಂದ, ಇದು ಪರಿವರ್ತನೆ. ಯಾರು ಮಾಡಲಿ ಮಾಡದಿರಲಿ, ನೋಡಲಿ ನೋಡದಿರಲಿ, ಗುರುತಿಸಲಿ ಗುರುತಿಸದಿರಲಿ ನಮ್ಮ ಕಾರ್ಯ ನಾವು ಮಾಡುತ್ತಾ ಹೋದರೆ ಏನೆಲ್ಲ ಬದಲಾವಣೆಯಾಗುತ್ತದೆ ಎನ್ನುವುದಕ್ಕೆ ನೀವು, ಈ ಶಾಲೆ, ಬದಲಾದ ಗುರುಗಳ ಮಾತುಗಳು ಸಾಕ್ಷಿ. ಚೆನ್ನನಂತಹ ಮಕ್ಕಳ ಅವಶ್ಯಕತೆ ಇಂದು ಇದೆ. ಅವನ ಕಾರ್ಯ ನಿಮಗೆ ಮಾದರಿಯಾದಂತೆ ಉಳಿದವರಿಗೂ ಆಗಲಿ. ಚೆನ್ನ ಇಂದಿನಿಂದ ನಮ್ಮ ಇಲಾಖೆಯ ರಾಯಭಾರಿ’ ಎಂದಾಗ ಚೆನ್ನ ನಾಚುತ್ತ ತಲೆತಗ್ಗಿಸಿ ನಿಂತಿದ್ದ. ರಾಮು, ನಾಗ ಉಳಿದ ಗೆಳೆಯರ ಖುಷಿಗೆ ಪಾರವೇ ಇರಲಿಲ್ಲ.

ರಾಮು, ನಿತ್ಯ ಚೆನ್ನನ ಬಗ್ಗೆ ತನ್ನ ತಂದೆಗೆ ಹೇಳುತ್ತಿದ್ದ. ರಾಮುವಿನ ತಂದೆ ಚೆನ್ನನ ವಿಷಯದ ಬಗ್ಗೆ ಆಯುಕ್ತರಿಗೆ ಬರೆದ ಒಂದು ಪತ್ರ ಹೊಸ ಸಂಚಲನವನ್ನು ಸೃಷ್ಟಿಸಿತ್ತು. ●